◆ **ತಾವು ಬಯಲು ನಾಡಿನ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಂಜಗಿಯವರು. ವಿಜಯಪುರದ ಸಾಂಸ್ಕೃತಿಕ ವಾತಾವರಣ ಹಾಗೂ ತಮ್ಮ ಬಾಲ್ಯದ ದಿನಗಳು ತಮ್ಮ ಬರಹದ ಮೇಲೆ ಪ್ರಭಾವ ಬೀರಿವೆಯೇ?**

ನಿಮ್ಮ ಈ ಪ್ರಶ್ನೆ ತುಂಬಾ ಸಾಮಾನ್ಯವಾದುದು ಎನ್ನುವಂತೆ ಕಂಡರೂ ತುಂಬಾ ಗಂಭೀರವಾದುದು. ಒಬ್ಬ ಬರಹಗಾರನ ಬದುಕಿನ ಹಾಗೂ ಪರಿಸರದ ಹಿನ್ನೆಲೆ ಆತನ ಬರವಣಿಗೆಯ ತಾತ್ವಿಕತೆಯನ್ನು ಅರಿಯುವುದಕ್ಕೆ ಅಗತ್ಯವಾದ ಚಾರಿತ್ರಿಕ ಮಾಹಿತಿಯ ಚೌಕಟ್ಟೊಂದನ್ನು ನಿರ್ಮಿಸುತ್ತದೆ. ಇರಲಿ, ನೀವು ಕೇಳಿದಂತೆ ನನ್ನ ಬಾಲ್ಯದ ದಿನಗಳು ಮತ್ತು ಅಂದಿನ ಪರಿಸರ ನನ್ನ ಮೇಲೆ ಖಂಡಿತ ಪ್ರಭಾವ ಬೀರಿವೆ. ನಾನು ಹುಟ್ಟಿದ್ದು ದೇಶ ಸ್ವಾತಂತ್ರ್ಯಗೊಂಡು ಒಂದೂವರೆ ದಶಕ ಕಳೆದ ನಂತರ. ಪ್ರಜ್ಞಾವಂತರ ಪಾಲಿಗದು ಬಲು ಎಚ್ಚರಿಕೆಯ ಕಾಲಘಟ್ಟ. ಕನ್ನಡ ಸಾಹಿತ್ಯದ ತಾತ್ವಿಕತೆಯಂತೂ ಭಿನ್ನವಾದ ಪಲ್ಲಟಕ್ಕೆ ಒಳಗಾದ ಸಂದರ್ಭ. ಸಾಮಾಜಿಕ ಚಿಂತಕರ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ದಟ್ಟವಾಗಿದ್ದ ಕಾಲ. ನನ್ನ ಜನಾಂಗದ ತುಸು ಜನ ಅಕ್ಷರ ಸಂಸ್ಕೃತಿಗೆ ತೆರೆದುಕೊಂಡಿದ್ದ ಕಾಲ. ನನ್ನ ಅದೃಷ್ಟವೇನೋ ಎನ್ನುವಂತೆ ನನ್ನಪ್ಪ ಒಂದಷ್ಟು ಓದಿಕೊಂಡಿದ್ದ. ಅದರ ಪರಿಣಾಮವಾಗಿ ಆತ ನನಗೆ ಓದಿನ ರುಚಿ ಹತ್ತಿಸಿದ. ಅಂಬೇಡ್ಕರ್‌ರಂತಹ ಮಹಾನುಭಾವರನ್ನು ತನ್ನರಿವಿನ ಮಿತಿಯೊಳಗೆ ಪರಿಚಯಿಸಿದ. ಅದು ನನ್ನ ಮೇಲೆ ಬಾಲ್ಯದಲ್ಲಿಯೇ ತುಂಬಾ ಪ್ರಭಾವವನ್ನು ಬೀರಿದ್ದುಂಟು. ಆ ಪ್ರಭಾವ ಮತ್ತಷ್ಟು ತೀವ್ರವಾಗಲಿಕ್ಕೆ ಕಾರಣವಾದುದು ಸುತ್ತಲಿನ ಸಾಂಸ್ಕೃತಿಕ ಲೋಕ. ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶದ, ಅದರಲ್ಲೂ ಗಡಿ ಭಾಗದಲ್ಲಿನ ಹಳ್ಳಿಗಾಡಿನ ಸಾಮಾಜಿಕ, ಸಾಂಸ್ಕೃತಿಕ ತರತಮಗಳು ನನ್ನನ್ನು ಬಲು ಕಾಡಿದವು. ಅವು ನನ್ನನ್ನು ಆ ಪ್ರಮಾಣದಲ್ಲಿ ಕಾಡದೇ ಹೋಗಿದ್ದರೆ ನಾನು ಇಂದು ಈ ರೀತಿಯ ಚಿಂತನೆಗೆ ನನ್ನನ್ನು ಒಡ್ಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲವೇನೋ ಅನ್ನಿಸುತ್ತೆ.

◆ **ದಲಿತ ಕುಟುಂಬದಿಂದ ಬಂದ ತಾವು ಇಂದು ಕನ್ನಡ ಸಾಹಿತ್ಯ ಲೋಕದ ಮುಖ್ಯ ಲೇಖಕರಾಗಿದ್ದೀರಿ. ಈ ಎತ್ತರಕ್ಕೆ ಏರುವ ಪಯಣದಲ್ಲಿ ಎದುರಾದ ಸವಾಲುಗಳು ಯಾವುವು?**

ಸವಾಲುಗಳ ಗುಡ್ಡವೇ ನನ್ನ ಮುಂದಿತ್ತು. ಒಂದೆಡೆ ಪ್ರಾಕೃತಿಕ ವಿಕೋಪದಿಂದ ಮೇಲಿಂದ ಮೇಲೆ ಅಪ್ಪಳಿಸುವ ಬರ, ಮತ್ತೊಂದೆಡೆ ಕೃತಕವಾಗಿ ವ್ಯವಸ್ಥೆ ರೂಪಿಸಿದ ಸಾಂಸ್ಕೃತಿಕ ಬರ. ಮೊದಲನೆಯ ಸವಾಲನ್ನು ನನ್ನ ಹೆತ್ತವರ ಅಮಿತವಾದ ಜವಾಬ್ದಾರಿಯಿಂದ ದಾಟಿದೆ. ನಂತರದ್ದನ್ನು ನನ್ನೊಳಗೆ ಹುಟ್ಟಿಕೊಂಡ ಸಾಂಸ್ಕೃತಿಕ ಎಚ್ಚರದಿಂದ ದಾಟಲು ಪ್ರಯತ್ನಿಸಿದೆ. ಅದನ್ನು ದಾಟುವುದಕ್ಕೆ ಊರುಗೋಲಾಗಿದ್ದು ನನ್ನ ಓದು. ನಾನು ಓದಿದ ಬುದ್ಧ, ಬಸವ, ಅಂಬೇಡ್ಕರ್, ಕನಕ, ಕುವೆಂಪುರಂತಹವರ ಬರಹಗಳು ನನ್ನಲ್ಲಿ ಹುಟ್ಟಿಸಿದ ಎಚ್ಚರ ಅಷ್ಟಿಷ್ಟಲ್ಲ. ನಮ್ಮದೇ ಆದ ಅಸ್ತಿತ್ವವಿರದ, ಎಲ್ಲದಕ್ಕೂ ವಿಧೇಯರಾಗಿರಬೇಕಾದ, ಮೇಲ್ಜಾತಿಯವರ ಮುನ್ನಡೆಗೆ ತೊಡಕಾಗಬಹುದಾದ, ನಕಾರಾತ್ಮಕವಾದ ನಿರೂಪಣೆಗಳಿಂದ ತುಂಬಿದ ಸಮುದಾಯದಿಂದ ಬಂದವನು ನಾನು. ನನ್ನ ಅಸ್ಮಿತೆಯನ್ನು ಕಟ್ಟಿಕೊಳ್ಳಲಿಕ್ಕೆ, ತಲೆಯೆತ್ತಿ ನಿಲ್ಲುವುದಕ್ಕೆ, ನನ್ನದೇ ಆದ ದಾರಿಯನ್ನು ರೂಪಿಸಿಕೊಳ್ಳುವುದಕ್ಕೆ, ನಕಾರಾತ್ಮಕತೆಯಿಂದ ಹೊರಬರುವುದಕ್ಕೆ ಹಲವು ಅವಮಾನಗಳನ್ನು ಎದುರಿಸಬೇಕಾಗಿ ಬಂದಿದೆ. ನಾನು ಅವುಗಳನ್ನೇ ಮೆಟ್ಟಿಲನ್ನಾಗಿಸಿಕೊಂಡು ಮೇಲೇರಿದ್ದೇನೆ, ಮೇಲೇರುತ್ತಿದ್ದೇನೆ.

◆ **ಜಾನಪದ ವಿದ್ವಾಂಸರಾದ ತಾವು ಕನ್ನಡ ಜಾನಪದ ಪರಂಪರೆಯೊಳಗೆ ದಲಿತ ಜಾನಪದವನ್ನು ನೋಡುವ ಕ್ರಮ ಯಾವುದು? ಸಮಾಜೋ ಜಾನಪದದ ವ್ಯಾಖ್ಯಾನವನ್ನು ಹೊಸ ಬರಹಗಾರರು ಹೇಗೆ ನೋಡಬೇಕು?**

ಜಾನಪದ ನಿಜವಾಗಿಯೂ ಈ ನೆಲದ ಜೀವನಾಡಿಯಾಗಿದೆ. ಅಲ್ಲಿ ಶುದ್ಧ, ಅಶುದ್ಧ ಎನ್ನುವುದೇ ಇರುವುದಿಲ್ಲ. ಅದು ಪ್ರಕೃತಿಯಷ್ಟೇ ನಿಷ್ಕಲ್ಮಶವಾದುದು. ಅಲ್ಲಿ ಆಯ್ಕೆ ಮತ್ತು ನಿರಾಕರಣೆಗಳ ಸಂಭವಿಸುವಿಕೆ ಇದ್ದಾಗಲೂ ಅದೊಂದು ಬಗೆಯಲ್ಲಿ ವಿಶಿಷ್ಟವಾಗಿ ಕಟ್ಟಲ್ಪಟ್ಟಿರುತ್ತದೆ. ಕಲ್ಪಿತ ಸತ್ಯಗಳ ಹೊರತಾಗಿ ವಾಸ್ತವ ಸತ್ಯಗಳೇ ಅಲ್ಲಿರುವುದರಿಂದ ಗತವನ್ನಾಗಲಿ,